ಕೊಟ್ಟಿದ್ದರಿಂದ ನಾನು ಕೊಠಡಿಯ ಒಂದು ಬದಿಯಲ್ಲಿ ಅಭ್ಯಾಸ ಮಾಡುತ್ತಿದ್ದೆ. ನಾನು ಅಭ್ಯಾಸ ಮಾಡುವುದನ್ನು ಅಪ್ಪ ಗಮನಿಸುತ್ತಿದ್ದರು. ವೇದಿಕೆಯಲ್ಲಿಯೂ ನನ್ನ ನೃತ್ಯವನ್ನು ನೋಡಿದ ಬಳಿಕ, 'ಬಹಳ ಸುಂದರ ನೃತ್ಯಪ್ರಕಾರವಿದು. ನೀನೂ ಚೆನ್ನಾಗಿ ಪ್ರಸ್ತುತಪಡಿಸಿದ್ದಿ' ಎಂದು ಮೆಚ್ಚುಗೆ ಸೂಚಿಸಿದರು. ಅಪ್ಪ ಹಾಗೆ ಒಂದು ಸಾಲು ಹೇಳಿದ್ದೇ ನನಗೆ ತುಂಬಾ ಖುಷಿಯಾಯಿತು.

**◆ ಅಮ್ಮ ಲೀಲಾ ಕಾರಂತ ಅವರು ಕರುಣಾಮಯಿಯಾಗಿದ್ದರು ಎಂದು ನೀವೊಂದು ಕಡೆ ಹೇಳಿದ್ದಿರಿ...**

ಅಮ್ಮ ತುಂಬಾ ಪುಸ್ತಕಗಳನ್ನು ಓದಿದ್ದರು. ಮನೆಗೆ ಬರುತ್ತಿದ್ದ ಪ್ರಸಿದ್ಧ ಸಾಹಿತಿಗಳು, ತಜ್ಞರ ಜೊತೆಗೆ ಚರ್ಚೆ ನಡೆಸುತ್ತಿದ್ದರು. ಅಪ್ಪನ ಒಂದೊಂದು ಸಾಹಸವನ್ನೂ ಸ್ವೀಕರಿಸಲು ಮನಸ್ಸು ಸಿದ್ಧಮಾಡಿಕೊಳ್ಳುತ್ತಿದ್ದರು. ಪುಸ್ತಕಗಳ ಮುದ್ರಣಕ್ಕಾಗಿ ನ್ಯೂಸ್ ಪ್ರಿಂಟ್‌ಗಳನ್ನು ಹೊತ್ತ ಲಾರಿಗಳು ನಮ್ಮ ಮನೆಯ ಮುಂದೆ ಬಂದು ನಿಂತಾಗ, 'ಓ, ಇನ್ನೊಂದು ಯೋಜನೆ ಶುರು ಮಾಡಿದ್ದಾರಲ್ಲಾ...' ಎಂದು ಚಿಂತೆಗೊಳಗಾಗುತ್ತಿದ್ದರು. ಅಪ್ಪನಂತೆಯೇ ಅಮ್ಮನೂ ಬಡವರು, ನಿರ್ಗತಿಕರನ್ನು ಕಂಡರೆ ಬಹಳ ಅನುಕಂಪ ತೋರಿಸಿ, ಅವರಿಗೆ ಆಸರೆ ನೀಡಿ ಸಹಾಯ ಮಾಡುತ್ತಿದ್ದರು. ಅಪ್ಪ ನಮ್ಮನ್ನು ಗದರುವ ಸಂದರ್ಭ ಬಂದಾಗಲೆಲ್ಲ ಉಪಾಯ ಮಾಡಿ ನಮ್ಮನ್ನು ಪಾರು ಮಾಡುತ್ತಿದ್ದರು.



ಕ್ಷಮಾ ರಾವ್ ರಚಿಸಿದ ಚಿತ್ರಕಲಾಕೃತಿ

**◆ ಮದ್ರಾಸು ಎಂಬ ಊರು ನಿಮ್ಮ ಕಲಾಜೀವನವನ್ನು ರೂಪಿಸಿದೆ ಎನ್ನಬಹುದು ಹಾಗಾದರೆ...**

ಹೌದು. ನನಗೆ ಪುತ್ತೂರಿನ ಬಾಲವನದ ಪಾಠಗಳು ಎಷ್ಟು ಮುಖ್ಯವೋ, ಅದರ ತಳಹದಿಯ ಮೇಲೆ ಮದ್ರಾಸಿನಲ್ಲಿ ನಾನು ಕಲೆಗೆ ಸಂಬಂಧಿಸಿದಂತೆ ಕಲಿತ ವಿಚಾರಗಳೂ ಅಷ್ಟೇ ಮುಖ್ಯ. ಕಲಾಕ್ಷೇತ್ರದಲ್ಲಿ ಸಂಸ್ಕೃತ ಪಂಡಿತೆ, ವಿದ್ವಾಂಸರಾದ ಎಸ್. ಶಾರದಾ ಅವರು ರುಕ್ಮಿಣಿ ದೇವಿ ಅವರಿಗೆ ಅಧ್ಯಯನ ಸಹಕಾರ ಮಾಡುವವರು. ರುಕ್ಮಿಣಿ ದೇವಿ ಅವರ ಸೌಂದರ್ಯಪ್ರಜ್ಞೆ ಬಹಳ ಉನ್ನತ ಮಟ್ಟದಲ್ಲಿತ್ತು. ದೇವದಾಸಿ ನೃತ್ಯವನ್ನು ಬ್ರಿಟಿಷ್ ಸರ್ಕಾರ ನಿಷೇಧಿಸಿದ ಬಳಿಕ, ಅವರು ಆ ನೃತ್ಯ ಪ್ರಕಾರದ ನೈಜವಾದ ಆಶಯ, ಅದರಲ್ಲಿರುವ ಉತ್ತಮ ಅಂಶಗಳು ಹೆಚ್ಚು ಪ್ರಖರವಾಗಿ ಗೋಚರಿಸುವಂತೆ, ಮರುನಿರೂಪಿಸುವಲ್ಲಿ ದೊಡ್ಡ ಪಾತ್ರ ವಹಿಸಿದರು. ನೃತ್ಯವಷ್ಟೇ ಅಲ್ಲ, ವೇದಿಕೆಯ ವಿನ್ಯಾಸ, ಬಣ್ಣಗಳ ಹೊಂದಾಣಿಕೆ, ನೃತ್ಯ ಪ್ರಸ್ತುತಿಯ ಗತಿಲಯಗಳಲ್ಲಿ ಅವರಿಗೆ ಅಪಾರವಾದ ಜ್ಞಾನವಿತ್ತು. ಹಾಗಾಗಿ, ಅವರು ಕೈಗೆತ್ತಿಕೊಂಡ ಪ್ರಸ್ತುತಿಗಳೆಲ್ಲ ಮನಮುಟ್ಟುವಂತೆ ಅನಾವರಣಗೊಳ್ಳುತ್ತಿದ್ದವು. ಅವರು ಆಯೋಜಿಸುತ್ತಿದ್ದ ಆರ್ಟ್ ಫೆಸ್ಟಿವಲ್ ಮಾದರಿಯ ಉತ್ಸವವನ್ನು ಬೇರೆ ಕಡೆ ಕಾಣುವುದು ಕಡಿಮೆ. ಅವರು ತಮ್ಮ ವಿನ್ಯಾಸಗಳಿಗೆ ಪೂರಕವಾಗುವಂತೆ, ಕಲಾಕ್ಷೇತ್ರದಲ್ಲಿ ಪೇಂಟಿಂಗ್ ವಿಭಾಗವನ್ನು ನಡೆಸುತ್ತಿದ್ದರು. ನೃತ್ಯಕ್ಕೆ ಚಿತ್ರಕಲೆಯ ಅಗತ್ಯವಿದೆ ಎಂದು ಅವರು ನಂಬಿದ್ದರು ಅನಿಸುತ್ತದೆ. ನಾನು ನನ್ನ ಮಕ್ಕಳನ್ನು ಶಾಲೆಗೆ ಕಳಿಸಿದ ಬಳಿಕ ಪೇಂಟಿಂಗ್ ತರಗತಿಗಳಿಗೆ ಹೋಗಲು ಆರಂಭಿಸಿದೆ. ಬಾಲವನದಲ್ಲಿ ಮತ್ತು ಸಾಲಿಗ್ರಾಮದಲ್ಲಿ ಅಪ್ಪ, ಕಲೆ–ಯಕ್ಷಗಾನ ಕ್ಷೇತ್ರದಲ್ಲಿ ಮಾಡುತ್ತಿದ್ದ ಕಲಾಪ್ರಯೋಗಗಳು ನನ್ನ ಮನಸ್ಸಿನಲ್ಲಿದ್ದವು. ನನಗೆ ಪೇಂಟಿಂಗ್ ಕಲಿಕೆ ಬಹಳ ಇಷ್ಟವಾಯಿತು. ಜೊತೆಗೆ ನೃತ್ಯಕ್ಕೆ ಸಂಬಂಧಿಸಿದ ಥಿಯರಿ ತರಗತಿಗಳಿಗೆ ಹಾಜರಾಗಲು ಅವಕಾಶ ಕೊಡುವಂತೆ ಕೋರಿದೆ. ಸಾಂಪ್ರದಾಯಿಕ ಭಾರತೀಯ ಚಿತ್ರಕಲೆ, ವಿಶ್ವ ಕಲಾ ಇತಿಹಾಸ, ನೃತ್ಯಕ್ಕೆ ಸಂಬಂಧಿಸಿದ